ನಮ್ಮ ಓದುಗರಿಗೆ, ಲೇಖಕರಿಗೆ,
ಎಲ್ಲಾ ಸಮಾಜ ಬಾಂಧವರಿಗೆ

## ಯುಗಾದಿಯ ಶುಭಾಶಯಗಳು

ಸಂಪಾದಕ ಮಂಡಳಿ, ಶ್ರೀಶಾರದಾ ಪತ್ರಿಕೆ

## ಶಿವರಾತ್ರಿ ಆಚರಣೆ

ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ದೇವಸ್ಥಾನದಲ್ಲಿ ತಾ.06-03-2008ರಂದು ಶ್ರೀ ಮಹಾಶಿವರಾತ್ರಿಯನ್ನು ಆಚರಿಸಲಾಯಿತು. ಬೆಳಿಗ್ಗೆ ಶ್ರೀ ಪಾವಂಜೆ ವಾಸುದೇವ ಉಪಾಧ್ಯಾಯರ ನೇತೃತ್ವದಲ್ಲಿ ಸಮಾಜ ಬಾಂಧವರು ಹಾಗೂ ಆಸುಪಾಸಿನ ಭಕ್ತಾದಿಗಳು ಶಿವಸಹಸ್ರನಾಮ ಪಾರಾಯಣ ಮಾಡಿದರು. ರುದ್ರಪಠಣ, ರುದ್ರಾಭಿಷೇಕ, ಭಜನೆ ಮತ್ತು ವಿಶೇಷ ಪೂಜಾ ಕಾರ್ಯಕ್ರಮಗಳು ನೆರವೇರಿದವು. ನಂತರ ಪ್ರಸಾದ ವಿತರಣೆ ನಡೆಯಿತು.

## ಇ-ಪತ್ರಿಕೆಯಾಗಿ 'ಶ್ರೀಶಾರದಾ'-ಪ್ರಕಟಣೆ

ಉಡುಪಿಯ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಮುಖವಾಣಿ ಶ್ರೀಶಾರದಾ ಪತ್ರಿಕೆಯನ್ನು ಫೆಬ್ರವರಿ-2007ರಿಂದ ಇ-ಪತ್ರಿಕೆಯಾಗಿ ಅಂತರ್ಜಾಲ (ಇಂಟರ್‌ನೆಟ್) ಮುಖಾಂತರ ಓದುಗರಿಗೆ ಒದಗಿಸಲಾಗಿದೆ.

ಈ ವ್ಯವಸ್ಥೆಯನ್ನು ಸಮಾಜ ಬಾಂಧವರು ಸಂತಸದಿಂದ ಸ್ವಾಗತಿಸಿದ್ದಾರೆ. ಅಲ್ಲದೆ ಮುಂಬಯಿ, ಬೆಂಗಳೂರು, ಅಹಮದಾಬಾದ್‌ಗಳಿಂದ ಮಾತ್ರವಲ್ಲದೆ ಹೊರ ದೇಶಗಳಾದ ಯು.ಎಸ್.ಎ., ಅಬುದಾಭಿ, ದುಬ್ಯಾ, ಫ್ರಾನ್ಸ್ ದೇಶಗಳಲ್ಲಿರುವ ನಮ್ಮ ಬಂಧುಗಳು ಇಂಟರ್‌ನೆಟ್ ಮೂಲಕ ಪತ್ರಿಕೆಯನ್ನು ಓದಿ ಶ್ರೀಶಾರದಾ ಬಳಗಕ್ಕೆ ಅಭಿನಂದನೆ ಸಲ್ಲಿಸಿದ್ದಾರೆ.

ಪತ್ರಿಕೆಗೆ ಲೇಖನಗಳು ಕೂಡಾ ಇ-ಮೇಲ್ ಮೂಲಕ ಬರಲಾರಂಭಿಸಿವೆ. ಸಮಾಜ ಬಾಂಧವರು ನಿರಂತರವಾಗಿ ಇ-ಮೇಲ್ ಸೌಲಭ್ಯದ ಉಪಯೋಗ ಪಡೆದುಕೊಂಡು ಶ್ರೀಶಾರದಾ ಪತ್ರಿಕೆಯ ಬೆಳವಣಿಗೆಯಲ್ಲಿ ಸಹಕರಿಸಬೇಕಾಗಿ ವಿನಂತಿ.

ವೆಬ್ ವಿಳಾಸದಲ್ಲಿ ಬದಲಾವಣೆ :

**www.srisharada.org**

ಓದುಗರ ಅನಿಸಿಕೆ-ಪ್ರತಿಕ್ರಿಯೆಗಳನ್ನು ಲಿಖಿತವಾಗಿ ಅಥವಾ ಇ-ಮೇಲ್ ವಿಳಾಸ : srisharadaudupi@yahoo.co.in ಮೂಲಕ ಕಳುಹಿಸಬಹುದು.

- ಸಂಪಾದಕರು

## ಸದಾಶಯ

ಸ್ಥಾನಿಕ ಬ್ರಾಹ್ಮಣ ವಧೂ-ವರರ ಮಾಹಿತಿ ಕೇಂದ್ರ

ಚಿಟ್ಪಾಡಿ, ಉಡುಪಿ.

: ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿರಿ :

**ಎಂ. ಸದಾನಂದರಾವ್ ಮತ್ತು ಎಂ. ಸಂತೋಷರಾವ್, ಚಿಟ್ಪಾಡಿ, ಉಡುಪಿ**

**Ph : 2522638, 2523394**

## ಶ್ರೀಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ) ಉಡುಪಿ

**ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರೋಡ್ ಉಡುಪಿ -1. ದೂರವಾಣಿ : 2522408**

### ಸನ್ಮಾನ್ಯ ಸದಸ್ಯರ ಅವಗಾಹನೆಗೆ

1. **2006-2007ನೇ ವರ್ಷದ ಲಾಭಾಂಶ (ಪಾಲು ಮುನಾಫೆ) ವಿತರಣೆ**
   ತಾ.23-02-2008ರಂದು ನಡೆದ ಸೊಸೈಟಿಯ ವಿಶೇಷ ಸರ್ವಸದಸ್ಯರ ಸಭೆಯಲ್ಲಿ ನಿರ್ಣಯ ಕೈಗೊಂಡಂತೆ ಪ್ರಾಥಮಿಕ ಸದಸ್ಯರಿಗೆ ಶೇ.10 ಲಾಭಾಂಶ (ಪಾಲು ಮುನಾಫೆ) ನೀಡಲಾಗಿದೆ. ಉಳಿತಾಯ ಖಾತೆ ಹೊಂದಿರುವ ಸದಸ್ಯರ ಖಾತೆಗಳಿಗೆ ಲಾಭಾಂಶವನ್ನು ತಾ.25-02-2007ರಂದು ಜಮೆ ಮಾಡಲಾಗಿದೆ. ಉಳಿತಾಯ ಖಾತೆ ತೆರೆಯದೇ ಇರುವ ಸದಸ್ಯರು ಖುದ್ದಾಗಿ ಸೊಸೈಟಿಗೆ ಬಂದು ಲಾಭಾಂಶವನ್ನು ಪಡೆದುಕೊಳ್ಳಬಹುದು.
2. **ಉಳಿತಾಯ ಖಾತೆ ತೆರೆದರೆ ಒಳಿತು :**
   ಉಳಿತಾಯ ಖಾತೆ ತೆರೆಯದೇ ಇರುವವರು ಒಂಟಿಯಾಗಿ ಅಥವಾ ಜಂಟಿಯಾಗಿ (ಕುಟುಂಬಿಕರು) ಉಳಿತಾಯ ಖಾತೆ ತೆರೆದರೆ (ಕನಿಷ್ಠ ರೂ.100/- ಮೂಲಬಂಡವಾಳದೊಂದಿಗೆ) ಆಯಾ ವರ್ಷದ ಲಾಭಾಂಶವನ್ನು ಆ ಉಳಿತಾಯ ಖಾತೆಗೆ ಕೂಡಲೇ ಜಮೆ ಮಾಡಲಾಗುವುದು.
3. **ಲಾಭಾಂಶ ಪಡೆದುಕೊಳ್ಳಲು ವಾಯಿದೆ :**
   ಯಾವುದೇ ಒಂದು ವರ್ಷದ ಲಾಭಾಂಶವನ್ನು ಅದು ಘೋಷಿಸಲ್ಪಟ್ಟಂದಿನಿಂದ ಮೂರು ವರ್ಷದೊಳಗೆ ಪಡೆದುಕೊಳ್ಳತಕ್ಕದ್ದು. ಇಲ್ಲದಿದ್ದರೆ 3 ವರ್ಷಗಳ ನಂತರ ಅದನ್ನು ಸೊಸೈಟಿಯ ಶಾಸನಾತ್ಮಕ ಮೀಸಲು ನಿಧಿಗೆ ವರ್ಗಾಯಿಸಲ್ಪಡುತ್ತದೆ. **ಅಲ್ಲದೆ ಮುಂದೆ ಅದನ್ನು ಪಡೆಯಲು ಸದಸ್ಯರು ಬೇಡಿಕೆ ಸಲ್ಲಿಸುವಂತಿಲ್ಲ.**
4. **2003-04ರ ವಾಯಿದೆ ಮೀರಿದ ಲಾಭಾಂಶ :**
   2007ರ ಏಪ್ರಿಲ್ ತಿಂಗಳ ಶ್ರೀಶಾರದಾ ಪತ್ರಿಕೆಯಲ್ಲಿ ಸದಸ್ಯರ ಅವಗಾಹನೆಗೆ ತಂದಂತೆ ವರ್ಷ 2003-04ರ (ಸದಸ್ಯರು ಪಡೆದುಕೊಳ್ಳದೆ) ಬಾಕಿ ಇರುವ ಲಾಭಾಂಶವನ್ನು ಶಾಸನಾತ್ಮಕ ನಿಧಿಗೆ ವರ್ಗಾಯಿಸಲಾಗಿದೆ.
5. **2004-05ರ ಪಾಲು ಮುನಾಫೆ :**
   ಇದನ್ನು ಪಡೆದುಕೊಳ್ಳಲು 2009ರ ಜೂನ್ ತಿಂಗಳ ವರೆಗೆ ಮಾತ್ರ ಅವಕಾಶವಿದೆ.
6. **ಗುರುತು ಚೀಟಿ :**
   ಈ ವರೆಗೆ ಸೊಸೈಟಿಯ ಗುರುತು ಚೀಟಿ (ಐಡೆಂಟಿಟಿ ಕಾರ್ಡ್) ಪಡೆಯದೇ ಇದ್ದವರು ಪಾಸ್‌ಪೋರ್ಟ್ ಅಳತೆಯ ತಮ್ಮ 2 ಭಾವಚಿತ್ರಗಳನ್ನು ನೀಡಿ ಗುರುತಿನ ಚೀಟಿ ಪಡೆದುಕೊಳ್ಳಬಹುದು. ಭಾವಚಿತ್ರವನ್ನು ಈಗಾಗಲೇ ನೀಡಿರುವವರು ಸೊಸೈಟಿಗೆ ಬಂದು ಗುರುತಿನ ಚೀಟಿಯನ್ನು ಪಡೆದುಕೊಳ್ಳಬಹುದು.

ಆಡಳಿತ ಮಂಡಳಿಯ ನಿರ್ದೇಶನದಂತೆ
**-ಕಾರ್ಯದರ್ಶಿ**

## ಪ್ರವಾಸ ಕಥನ

(...4ನೇ ಪುಟದಿಂದ)

ಇಂತಹ ಆಹ್ಲಾದಕರವಾದ ಪರಿಸರದಲ್ಲಿ ಕೆಲವೊಂದು ಮನೋರಂಜನಾತ್ಮಕವಾದ ಕಾರ್ಯಕ್ರಮಗಳು ಸ್ಪರ್ಧಾ ರೂಪದಲ್ಲಿ ಜರಗಿದವು. ಹೌಸಿ-ಹೌಸಿ ಆಟ, ಟೊಪ್ಪಿಯಾಟ, ಪಾಸಿಂಗ್ ದ ಬಾಲ್, ಪಿಕ್ ಎಂಡ್ ಆ್ಯಕ್ಟ್ ಸ್ಪರ್ಧೆಗಳಲ್ಲಿ ಎಲ್ಲಾ ವಯೋಮಾನದವರು ಬಹಳ ಆಸಕ್ತಿಯಿಂದ ಭಾಗವಹಿಸಿದರು.

ಮಧ್ಯಾಹ್ನದ ಭೋಜನಕ್ಕೆ ಒತ್ತು ಶ್ಯಾವಿಗೆ, ಕಾಯಿಹಾಲು, ಉಪ್ಪಿನಕಾಯಿ, ಅನ್ನ, ಸಾರು, ಸಾಂಬಾರ್, ಮೊಸರನ್ನ, ಪೋಡಿ, ಅಪ್ಪಿ ಪಾಯಸದಿಂದ ಕೂಡಿದ ರುಚಿಕರವಾದ ಭೋಜನ ಉಂಡ ಸಮಾಜ ಬಾಂಧವರು ಲಾನ್‌ನಲ್ಲಿ, ಬೀಚ್ ಹೌಸ್ ಮಾಳಿಗೆಯಲ್ಲಿ, ಲಾನ್‌ನಲ್ಲಿ, ಬೆಡ್‌ರೂಮಿನಲ್ಲಿ ಎಲ್ಲೆಂದರಲ್ಲಿ ಮಲಗಿ ಆಯಾಸ ಪರಿಹಾರ ಮಾಡಿಕೊಳ್ಳುತ್ತಿದ್ದರು.

ಸಂಜೆ 3 ಗಂಟೆಗೆ ಸರಿಯಾಗಿ ಊಟ ಮಾಡಿ ದಣಿದ ಬಾಂಧವರನ್ನು ಎಬ್ಬಿಸಿ ಮನೋರಂಜನಾ ಆಟಗಳಾದ ಮಾನವ ಸರಪಳಿ, ದಂಪತಿಗಳಿಗೆ ಮುಸುಂಬಿ ತಿನ್ನುವ ಸ್ಪರ್ಧೆ, ಸಿನೇಮಾ ಹಾಡನ್ನು ಹೇಳುವ ಸ್ಪರ್ಧೆ, ಕೆರೆ-ದಡ ಸ್ಪರ್ಧೆಯನ್ನು ನಾಗರಾಜ ವರ್ಕಾಡಿ, ಶ್ರೀಕಾಂತ್‌ರಾವ್, ಶೈಲಜಾ ಶ್ರೀಕಾಂತ್, ಸೋಮಶೇಖರ್‌ರಾವ್, ಅರುಣಾ ಸೋಮಶೇಖರ್, ವಿನೋದ್‌ರಾವ್ ಬಿ.ಎಸ್.ರವರು ಸಮರ್ಥವಾಗಿ ನಿರ್ವಹಿಸಿ, ಸಮಾಜ ಬಾಂಧವರೆಲ್ಲರೂ ನಕ್ಕು-ನಲಿಯುವಂತೆ ಮಾಡಿದರು. ಸಾಯಂಕಾಲ ಬಟಾಟೆ ಅಂಬೊಡೆ, ಚಕ್ಕುಲಿ, ಬಾಳೆಹಣ್ಣು, ಚಾ, ಕಾಫಿಯ ಉಪಹಾರವನ್ನು ಎಲ್ಲಾ ಬಾಂಧವರಿಗೆ ನೀಡಲಾಯಿತು. ಸಮುದ್ರದ ನೀರಿನಲ್ಲಿ ಆಟವಾಡಿದ ಬಾಂಧವರೆಲ್ಲರೂ ಸಂಜೆಯ ತಂಪುಗಾಳಿ ಬೀಸುತ್ತಿದ್ದಂತೆ, ಪಡುವಣದಲ್ಲಿ ದಿನಕರ ಆಗಲೇ ಅಸ್ತಂಗತನಾಗಲು ಸನ್ನದ್ಧನಾಗುತ್ತಿದ್ದಂತೆ ಒಲ್ಲದ ಮನಸ್ಸಿನಿಂದ ಬಸ್ಸಿಗೆ ಹತ್ತಿ ಕುಳಿತೆವು. ಹಿರಿಯರು, ಕಿರಿಯರು, ಮಕ್ಕಳು, ಹಾಡುತ್ತಾ ಕುಣಿಯುತ್ತಾ ಎಲ್ಲರಿಗೂ ಬೈ-ಬೈ ಹೇಳುತ್ತಾ ರಾತ್ರಿ 7 ಗಂಟೆಗೆ ಮಂಗಳೂರಿಗೆ ತಲುಪಿದೆವು. ಎಲ್ಲರ ಮುಖದಲ್ಲಿ ಒಂದು ದಿನವನ್ನು ಸಂತೋಷದಿಂದ ಕಳೆದ ತೃಪ್ತಿಯು ಕಾಣುತ್ತಿತ್ತು.




Owned & Published by Y. Bhuvanendra Rao, Secretary Sthanika Dravida Brahmana Sangha (R.), Shri Sharada Mantapa, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Bailur, Udupi, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org